ಹೆಚ್ಚು ಹೊತ್ತು ಬಾಳುತ್ತಿರಲಿಲ್ಲ. ಮತ್ತದೇ ಆತಂಕ. ಮತ್ತದೇ ವ್ಯಗ್ರ ಮನೋಸ್ಥಿತಿ. ಅವನು ಕಾಲೇಜಿಗೆ ಬರುತ್ತಿಲ್ಲ ಎಂಬುದನ್ನು ತನ್ನ ಹೊರತಾಗಿ ಬೇರೆ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಅವಳಿಗೆ ಗೊತ್ತಾಗಿದೆ. ದಿನ ಲೆಕ್ಕ ಹಾಕುತ್ತಿರುವುದು ತಾನು ಮಾತ್ರ.

ಸುಮಾರು ಒಂದು ತಿಂಗಳೇ ಕಳೆದುಹೋಯ್ತು ಅಂದುಕೊಳ್ಳುವಾಗ ಅದೊಂದು ದಿನ ಅವನು ಕಾಲೇಜಿಗೆ ಹಾಜರಾದ. ಭಾಮ ಅವನನ್ನು ಗಮನಿಸಿದರೂ ಅವನಿಗೆ ಈ ಕಡೆಯ ಲಕ್ಷ್ಯವಿಲ್ಲ. ಸೊರಗಿ ಹೋಗಿದ್ದಾನೆ ವೆಂಕಟೇಶ. ಕಾಯಿಲೆ ಬಿದ್ದಿದ್ದೇ ನಿಜವೇ? ಅಯ್ಯೋ ಪಾಪ.. ಅಂದುಕೊಂಡಳು ಭಾಮ. ಮಾನವೀಯ ದೃಷ್ಟಿಯಿಂದಲಾದರೂ ಅವನನ್ನು ವಿಚಾರಿಸಿಕೊಳ್ಳಬೇಕು ಎನ್ನುವ ತುಡಿತ ತೀವ್ರವಾಯ್ತು. ಆದರೆ ಆ ತೀವ್ರತೆಗೆ ತಕ್ಕಂತೆ ಸಂದರ್ಭ ಕೂಡಿ ಬರಲಿಲ್ಲ. ಅದು ಸುಲಭವೂ ಆಗಿರಲಿಲ್ಲ.

* * *

ಕೊನೆಗೂ ಒಂದು ಉಪಾಯ ಹುಡುಕಿಕೊಂಡಳು ಭಾಮ. ಮನೆಗೆ ಯಾವತ್ತೋ ಹೊಸ ಕಾರು ಬಂದಿದ್ದರೂ ಅವಳು ಕಾಲೇಜಿಗೆ ಕಾರಿನಲ್ಲಿ ಬರುತ್ತಿದ್ದಿದ್ದು ಅಪರೂಪ. ಭಾರ್ಗವ ಹೇಳಿದಂತೆ ಡ್ರೈವರನ್ನು ಇಟ್ಟುಕೊಂಡಿರಲಿಲ್ಲ ಚಿದಾನಂದ. ತಾನೇ ಡ್ರೈವಿಂಗ್ ಕಲಿತಿದ್ದ. ರಜಾ ದಿನಗಳಲ್ಲಿ ಮಕ್ಕಳನ್ನು ಹೊರಗೆಲ್ಲಾದರೂ ತಿರುಗಾಡಲು ಕರೆದುಕೊಂಡು ಹೋಗುತ್ತಿದ್ದ. ಅಪ್ಪನೊಡನೆ ಸುತ್ತಾಡಲು ಭಾಮನಿಗೆ ಮೊದಲಿನ ಉತ್ಸಾಹವಿಲ್ಲ. ಮನಸ್ಸೂ ಇಲ್ಲ. ಆದರೆ ಭಾರ್ಗವ ಸುಮ್ಮನಿರುವ ಜಾಯಮಾನದವನಲ್ಲ. ಅವನಾಗಲೇ ತಾನೂ ಡ್ರೈವಿಂಗ್ ಕಲಿತು ಕಾರು ಓಡಿಸಬೇಕೆಂದು ಹಪಹಪಿಸುತ್ತಿದ್ದ.

'ಎಷ್ಟೊಷ್ಟಾನೋ ನಿಂಗೆ? ನೆಟ್ಟಗೆ ಹದಿನೈದೂ ತುಂಬಿಲ್ಲ. ಕಾರು ಓಡಿಸೋಕೆ ಹೋದ್ರೆ ಒದ್ದು ಜೈಲಿಗೆ ಹಾಕ್ತಾರೆ'.

'ಕಲಿಯೋಕೇನಂತೆ?' ಅನ್ನುತ್ತಿದ್ದ ಹುಡುಗ.

'ಅದಕ್ಕೂ ವಯಸ್ಸು ಅನ್ನೋದಿರುತ್ತೆ. ಆಮೇಲೆ ಮಾರಾಯನಾಗಿ ಕಲಿ. ಯಾರು ಬೇಡಾಂತಾರೆ?'

'ನೀನಿದೀಯಲ್ಲ, ಏನು ಮಾಡೋಕೆ ಹೋದ್ರೂ ಏನೋ ಒಂದು ಹೇಳ್ತಿ...' ಅಕ್ಕನ ಮೇಲೆ ಅಸಮಾಧಾನ ತೋರಿಸಿದ್ದ ಭಾರ್ಗವ.

'ಮಾತಿಗೆ ಪ್ರತಿ ಮಾತು ಹೇಳೋಕೆ ಚೆನ್ನಾಗಿ ಕಲ್ತಿದ್ದಿ. ಒಳ್ಳೇದಲ್ಲ ಕಣೋ...' ಬುದ್ಧಿ ಹೇಳಿದ್ದಳು ಭಾಮ. ಸ್ನೇಹಿತರು, ಸ್ನೇಹಿತರು ಎಂದು ಸದಾ ಮನೆಯ ಹೊರಗೆ ಕಾಲ ಕಳೆಯುತ್ತಿದ್ದವನು ಎಲ್ಲಿ ದಾರಿ ತಪ್ಪುತ್ತಾನೋ ಎಂದು ಅವಳಿಗೆ ದಿಗಿಲು. ಅಮ್ಮ ಇದ್ದಿದ್ದರೆ ಮನೆಯೊಳಗೆ ಒಂದು ಸೆಳೆತ ಇರುತ್ತಿತ್ತೇನೋ. ಈಗ ಬೇಕಾಬಿಟ್ಟಿ ಬೆಳೆಯುತ್ತಿದ್ದಾನೆ.

ವೆಂಕಟೇಶ ಅವಳನ್ನು ಮಾತಾಡಿಸಿದ್ದು ಅವಳು ಒಂಟಿಯಾಗಿ ಬಸ್ಸಿಗೆ ಕಾಯುತ್ತಿದ್ದಾಗ. ಅಂಥದೇ ಸಂದರ್ಭವನ್ನು ಮತ್ತೊಮ್ಮೆ ಉಪಯೋಗಿಸಿಕೊಳ್ಳಬೇಕೆಂದು ನಿಶ್ಚಯಿಸಿದಳು ಭಾಮ. ಗೆಳತಿಯರಿಬ್ಬರೊಡನೆ ಬಸ್ ನಿಲ್ದಾಣದಲ್ಲಿ ಕಾದು ನಿಂತವಳು ತಾನು ಹೋಗಬೇಕಾದ ಬಸ್ ಬಂದರೂ ಹತ್ತದೆ, 'ಮನೆಯಿಂದ ಕಾರು ಬರುತ್ತೆ. ಅಪ್ಪ ಇವತ್ತು ರಜಾ...' ಎನ್ನುವ ನೆಪ ಹೇಳಿ ವೆಂಕಟೇಶನಿಗಾಗಿ ಕಾದಳು. ಗೆಳತಿಯರು ಹೊರಟು ಹೋದ ಮೇಲೆ ಅವಳಿಗೆ ಮುಳ್ಳ ಮೇಲೆ ನಿಂತಂಥಾ ಚಡಪಡಿಕೆ. ಇಷ್ಟು ಹೊತ್ತಿಗೆ ಅವನು ಬಸ್ ಹತ್ತಲು ಬರಬೇಕಿತ್ತಲ್ಲವೇ? ಎಲ್ಲಿಗೆ ಹೋದ? ಲೈಬ್ರರಿಯ ಕಡೆ? ಬರುತ್ತಾನೋ, ಇಲ್ಲವೋ? ಕ್ಷಣವೊಂದು ಯುಗವೆನಿಸುತ್ತಿದ್ದಂತೆ ಅಗೋ, ಅವನು ಬಂದೇ ಬಂದ. ಇವಳು ನಿಂತಿದ್ದನ್ನು ನೋಡಿಯೂ ನೋಡದಂತೆ ಅಷ್ಟು ದೂರ ಹೋಗಿ ತನ್ನ ಬಸ್ಸಿಗೆ ಕಾದು ನಿಂತ. ಈಗ ತನ್ನ ಕಡೆ ನೋಡುತ್ತಾನೆ, ಇನ್ನೊಂದು ಕ್ಷಣಕ್ಕೆ ನೋಡುತ್ತಾನೆ ಎಂದು ಕಾದಳು ಭಾಮ. ಅವನು ದೃಷ್ಟಿ ತಿರುಗಿಸಲಿಲ್ಲ. ಇನ್ನೇನು ಬಸ್ಸು ಬಂದರೆ ಅವನು ಹೊರಟು ಹೋಗಿ ಬಿಡುತ್ತಾನೆ ಎಂದುಕೊಂಡ ಭಾಮ ತಾನೇ ಸೋತು ಅವನ ಕಡೆ ಹೆಜ್ಜೆ ಹಾಕಿದಳು. ಅವಳು ಹೋಗಿ ಪಕ್ಕದಲ್ಲಿ ನಿಂತಾಗ ಒಮ್ಮೆ ಅವಳ ಕಡೆ ನೋಡಿದ ವೆಂಕಟೇಶ ಮಾತಿಗೆ ಮನಸ್ಸಿಲ್ಲದವನಂತೆ ಮುಖ ತಿರುಗಿಸಿಕೊಂಡಿದ್ದು ಕಂಡು ಭಾಮನಿಗೆ ಆತಂಕ. ತಾನೇನಂಥ ತಪ್ಪು ಮಾಡಿದ್ದೇನೆ ಎನ್ನುವ ಶಂಕೆ.

'ತಿಂಗಳುಗಟ್ಲೆ ಕಾಲೇಜಿಗೆ ಬರದೆ ಎಲ್ಲಿಗೆ ತಪ್ಪಿಸಿಕೊಂಡಿದ್ರಿ? ಅಂಥಾದ್ದು ಏನಾಯ್ತು? ಹುಷಾರಿರ್ಲಿಲ್ವಾ' ಕಳಕಳಿಯಿಂದ ವಿಚಾರಿಸಿದಳು ಭಾಮ. ಅವನು ತುಟಿಯೊಡೆಯಲಿಲ್ಲ.

'ಯಾಕೆ? ನನ್ನ ಹತ್ರ ಮಾತಾಡೋಕೆ ಮನಸ್ಸಿಲ್ವಾ? ಅಂಥದ್ದೇನಾಯ್ತು ಹೇಳಿ...'

ಅವನು ಜೇಬಿನಿಂದ ಕರವಸ್ತ್ರ ತೆಗೆದು ಮುಖ ವರೆಸಿಕೊಂಡ. ಮುಖ ವರೆಸಿಕೊಳ್ಳುವ ನೆಪದಲ್ಲಿ ಕಣ್ಣೀರನ್ನೂ ತೊಡೆದುಕೊಂಡ ಎಂದು ಇವಳಿಗೆ ಅನುಮಾನ.

'ಏನೋ ಕೇಳ್ಬೇಕು ಅನ್ನಿಸ್ತು, ಕೇಳ್ದೆ. ತುಂಬಾ ಸೊರಗಿ ಹೋಗಿದೀರಿ ನೀವು. ನೋಡಿದ್ರೆ ಅಯ್ಯೋ ಅನ್ನುತ್ತೆ...'

ಈಗ ಅವಳಿಗೆ ಸ್ಪಷ್ಟವಾಗಿ ಅರಿವಾಗುವಂತೆ ಅವನು ಗದ್ಗದಿಸಿದ. 'ನಮ್ಮನೆ ಸಂತೋಷಾನೇ ಹಾಳಾಗಿ ಹೋಯ್ತು ಕಣ್ರೀ' ಅನ್ನುವಾಗ ಕಣ್ಣಿಂದ ಇಳಿದ ನೀರು ಕೆನ್ನೆ ತೋಯಿಸಿ, ಭಾಮನಿಗೆ ತನ್ನದೇ ಗತಕಾಲ ಕಣ್ಣೆದುರು ಸುಳಿಯಿತು. ಇವನ ಅಮ್ಮನೂ ಸತ್ತು ಹೋದರೇ? ಅಥವಾ ಅಪ್ಪ? ಅದಕ್ಕೇ ಕಂಗೆಟ್ಟು ಹೋಗಿದ್ದಾ ವೆಂಕಟೇಶ?

'ಯಾರು ತೀರ್ಕೊಂಡ್ರು?' ಕೇಳಿದಳು ಭಾಮ ಕನಿಕರದ ದನಿಯಲ್ಲಿ.

'ತೀರ್ಕೊಂಡಿದ್ದಲ್ಲ, ಕೊಲೆಯಾಗಿದ್ದು'

'ಆಂ'

'ನಮ್ಮಕ್ಕನ್ನ ಆ ಸಂಶಯ ಪಿಶಾಚಿ ಕೊಲೆ ಮಾಡ್ಬಿಟ್ಟ ಕಣ್ರೀ. ಆವಾಗಷ್ಟೇ ಮೂರು ತಿಂಗಳ ಬಾಣಂತನ ಮುಗಿಸ್ಕೊಂಡು ಗಂಡನ ಮನೆಗೆ ಹೋಗಿದ್ಲು. ಅದು ತನ್ನ ಮಗೂನೇ ಅಲ್ಲ ಅಂತ ಅವನಿಗೆ ಅನುಮಾನ. ಬೆಳ್ಳಗೆ ದೃಷ್ಟಿ ತಾಗೋ ಹಾಗಿತ್ತು ಮಗು. ಅದರ ಬಣ್ಣಾನೇ ಅದಕ್ಕೆ ಶಾಪ ಆಯ್ತು.'

'ಛೇ'

'ತಾಯೀನೂ ಕೊಂದ. ಮಗೂನೂ ಕೊಂದ. ಈಗ ನಿಶ್ಚಿಂತೆಯಾಗಿ ಜೈಲಲ್ಲಿದಾನೆ. ಸಿಗ್ಬೇಕಿತ್ತು ನನ್ನ ಕೈಗೆ. ಚಿತ್ರಹಿಂಸೆ ಕೊಟ್ಟು ಹುಟ್ಲಿಲ್ಲ ಅನ್ನಿಸಿಬಿಡ್ತಿದ್ದೆ. ಕೈಕಾಲು ಮುರಿದು ಮೂಲೇಲಿ ಕೂರಿಸ್ತಿದ್ದೆ. ಇನ್ಯಾವತ್ತೂ ಕಂಡೋರ ಮನೆ ಹೆಣ್ಣುಮಕ್ಕಳನ್ನ ಅನುಮಾನದಿಂದ ನೋಡೋಕಾಗ್ದಿದ್ದ ಹಾಗೆ ಕಣ್ಣು ಕಿತ್ತು'

ಕಠೋರವಾಗುತ್ತಿತ್ತು ವೆಂಕಟೇಶನ ದನಿ. ಮುಷ್ಟಿ ಬಿಗಿಯುತ್ತಿತ್ತು. ಕೇಳುತ್ತಿದ್ದ ಭಾಮನಿಗೆ ಕಟ್ಟುಕತೆಯೊಂದನ್ನು ಕೇಳಿದ ಭಾಸ. ಒಬ್ಬ ಮನುಷ್ಯ ಕೈಹಿಡಿದವಳನ್ನು, ಹೊಟ್ಟೆಯಲ್ಲಿ ಹುಟ್ಟಿದ ಕಂದನನ್ನು ಮುಗಿಸಿಬಿಡುವಷ್ಟು ಕ್ರೂರಿಯಾಗಲು ಸಾಧ್ಯವೇ? ಯುಕ್ತಾಯುಕ್ತ ವಿವೇಚನೆ ಕಳೆದುಕೊಳ್ಳುವಷ್ಟು? ಮುಂದಿನ ಪರಿಣಾಮದ ಕುರಿತು ಚಿಂತಿಸದಷ್ಟು?

'ನಮ್ಮ ಹಣೇಬರ ನೋಡಿ. ಮದುವೆ ಆದಾಗಿಂದ ಒಂದಿನ ಅವಳು ಸುಖವಾಗಿರೋಕೆ ಬಿಡ್ಲಿಲ್ಲ. ಹೊಂದ್ಕೊಂಡು ಹೋಗು, ಹೊಂದ್ಕಂಡು ಹೋಗು. ಒಂದು ಮಗು ಆದ್ರೆ ಎಲ್ಲಾ ಸರಿಯಾಗುತ್ತೆ ಅಂತ ತೌರುಮನೇಲಿ ಬುದ್ಧಿ ಹೇಳಿದ್ವೇ ವಿನಾ ಬಿಟ್ಟು ಬಾ ಆ ಸಂಶಯ ಪಿಶಾಚಿಯನ್ನ. ನಾವಿದೀವಿ ನಿಂಗೆ ಅಂತ ಯಾರೂ ಧೈರ್ಯ ಹೇಳ್ಲಿಲ್ಲ. ಎಂತಾ ಪಾಪಿಗಳು ನಾವು. ಮನೆಮಗಳನ್ನೇ ಬಲಿ ಕೊಟ್ಬಿಟ್ವಿ..'

'...'

'ಜನರ ಎದುರು ಮರ್ಯಾದೆ ಹೋಗುತ್ತೆ, ಆಡ್ಕೊಂಡು ನಗ್ತಾರೆ. ಅಷ್ಟೆಲ್ಲಾ ದುಡ್ಡು ಸುರಿದು ಮದುವೆ ಮಾಡಿದ್ದು ದಂಡ ಆಗುತ್ತೆ ಅನ್ನೋದಕ್ಕೆ ಇಷ್ಟು ದೊಡ್ಡ ಬೆಲೆ ತೆರಬೇಕಾ ಅಂತ ಈಗ ಪಶ್ಚಾತ್ತಾಪ ಆಗ್ತಿದೆ. ನಮ್ಮ ಬದುಕು ನಮ್ಮದು. ನಮ್ಮನೆ ಅನ್ನ ನಾವು ತಿಂದ್ಕೊಂಡಿರ್ತೀವಿ ಅನ್ನೋ ಸತ್ಯ ಯಾಕೆ ಹೊಳೀಲಿಲ್ವೋ? ಆಗಷ್ಟೇ ನಗೋಕೆ ಕಲ್ತಿದ್ದ ಮಗೂನೂ ಕೊಂದು ತಿಂದ ರಾಕ್ಷಸ.'

ವೆಂಕಟೇಶ ಗಳಗಳನೆ ಅತ್ತು ಬಿಟ್ಟ. ಭಾಮ ತನಗೇ ಅರಿವಿಲ್ಲದೆ ಅವನ ಕೈ ಹಿಡಿದು ಅದುಮಿದಳು, ಸಂತೈಸುವಂತೆ.

'ಸಮಾಧಾನ ಮಾಡ್ಕೊಳ್ಳಿ. ಹತ್ತಿರದೋರನ್ನ ಕಳ್ಕೊಂಡ ಅನುಭವ, ಆ ನೋವು, ಆ ಸಂಕಟ ನನಗೂ ಗೊತ್ತುಂಟು. ಅಮ್ಮ ಇಲ್ಲ ನಂಗೆ...' ಅಂದಳು.

'ಹೇಳೋದು ಸುಲಭ ಕಣ್ರೀ. ತಾನಾಗಿ ಸಾವು ಬರೋದು ಬೇರೆ, ಪಾಪಿಗಳು ಉಸಿರು ನಿಲ್ಲಿಸೋದು ಬೇರೆ...'

'ಆಯ್ತಲ್ಲ. ನಿಮ್ಮ ಭವಿಷ್ಯಾನೂ ನೀವು ನೋಡ್ಕೋಬೇಕಲ್ವಾ? ಮನೆಯೋರಿಗೆ ಧೈರ್ಯ ಕೊಡ್ಬೇಕಲ್ವಾ? ಅರ್ಧಕ್ಕರ್ಧ ಆಗಿ ಹೋಗಿದೀರಿ...'

'ಅಯ್ಯೋ, ಬದುಕಿ ಏನಾಗ್ಬೇಕಿದೆ ಬಿಡಿ. ಅಕ್ಕ ಅಂದ್ರೆ ನಂಗೆ ಪಂಚಪ್ರಾಣ. ಅವಳಿದ್ದಲ್ಲಿಗೆ ನಾನೂ ಹೋದ್ರೆ ಸಮಾಧಾನ ಆಗುತ್ತೇನೋ...'

'ಒಳ್ತು ಅನ್ನಿ, ಒಳ್ತು ಅನ್ನಿ' ತಾನೂ ಗದ್ಗದಳಾಗಿದ್ದಳು ಭಾಮ, ಸಹಪಾಠಿಯೊಬ್ಬನ ಸಂಕಟದಲ್ಲಿ ಹೃತ್ಪೂರ್ವಕವಾಗಿ ಭಾಗಿಯಾಗಿ.

(ಸಶೇಷ)